6. ಗಮನ ಸೆಳೆಯುವ ಸೂಚನೆ :

ಅ) ರಾಜ್ಯದಲ್ಲಿ ಕಳೆದ ವರ್ಷ ಕಡಲೆಕಾಯಿ ಬೆಳೆ ವಿಫಲಗೊಂಡಿದ್ದರಿಂದ ರೈತರಿಗೆ ಉಂಟಾಗಿರುವ ನಷ್ಟಕ್ಕೆ ಪರಿಹಾರ ಹಾಗೂ ಈಗ ಬಿತ್ತನೆ ಕಡಲೆಕಾಯಿ ಬೀಜ ದೊರೆಯದಿರುವುದರಿಂದ ರೈತರಿಗೆ ಆಗಿರುವ ತೊಂದರೆ.

+ಶ್ರೀ ವೆಂಗಟರಮಣಪ್ಪ (ಪಾವಗಡ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಕಳೆದ ವರ್ಷ ಕಡಲೆಕಾಯಿ ಬೆಳೆ ವಿಫಲಗೊಂಡಿದ್ದರಿಂದ ರೈತರಿಗೆ ಉಂಟಾಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ ಹಾಗೂ ಈಗ ಬಿತ್ತನೆ ಕಡಲೆಕಾಯಿ ಬೀಜ ದೊರೆಯದಿರುವುದರಿಂದ ರೈತರಿಗೆ ಆಗಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಸುಮಾರು ಹತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆಯನ್ನು ಬೆಳೆಯುತ್ತಿದ್ದು, ಪ್ರತಿ ಹೆಕ್ಟೇರ್‌ಗೆ 150 ಕೆ.ಜಿ (1.5 ಕ್ವಿಂಟಾಲ್) ಬಿತ್ತನೆ ಬೀಜ ಬೇಕಾಗಿದ್ದು, ಸುಮಾರು 15 ಲಕ್ಷ ಕ್ವಿಂಟಾಲ್ ನೆಲಗಡಲೆ ಬಿತ್ತನೆ ಬೀಜ ಬೇಕಾಗುತ್ತದೆ. ಇಲಾಖೆ ಕಾರ್ಯಕ್ರಮದ ಪ್ರಕಾರ ಶೇಕಡ 10 ರಷ್ಟು ಪ್ರದೇಶದಲ್ಲಿ ಪ್ರಮಾಣೀಕರಿಸಿದ : ಗುಣಮಟ್ಟದ ಬಿತ್ತನೆ ಬೀಜ ಬದಲಿಕೆ ಆಧಾರದ ಮೇಲೆ ಒದಗಿಸಿಕೊಡಬೇಕಾಗಿದೆ ಸುಮಾರು 1.5 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಅವಶ್ಯಕತೆಯಿದ್ದು, ಈ ಬಿತ್ತನೆ ಬೀಜವನ್ನು ಒದಗಿಸಿ ಕೊಡಲು ಸರ್ಕಾರವು ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಸರ್ಕಾರದ ಬೀಜೋತ್ಪಾದನಾ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ, ಕರ್ನಾಟಕ ಎಣ್ಣೆಕಾಳು ಬೆಳೆಗಾರರ ಮಹಾ ಮಂಡಲಿ ಮತ್ತು ರಾಷ್ಟ್ರೀಯ ಬೀಜ ನಿಗಮ ಹಾಗೂ ಖಾಸಗಿ ಮಾರಾಟಗಾರರು ಮತ್ತು ಗುಣಮಟ್ಟದ ಬೀಜೋತ್ಪಾದನೆ ಕೈಗೊಳ್ಳುವ ರೈತರ ಮುಖೇನ ಒದಗಿಸಿ ಕೊಡಲು ಯೋಜಿಸಲಾಗಿದೆ. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಮತ್ತು ವಿವಿಧ ಬೀಜೋತ್ಪಾಧನಾ ಸಂಸ್ಥೆಗಳ ಮುಖ್ಯಸ್ಥರೊಡನೆ ಹಲವಾರು ಸಭೆಗಳನ್ನು ಸಡೆಸಿ 1999ನೇ ಮುಂಗಾರಿನಲ್ಲಿ ಬೆಳೆ ವಿಫಲವಾಗಿರುವ ಜಿಲ್ಲೆಗಳಲ್ಲಿ ಬಿತ್ತನೆ ಬೀಜದ ಕೊರತೆಯನ್ನು ಗುರುತಿಸಿ ಸಂಬಂಧಪಟ್ಟ ಜಿಲ್ಲೆಗಳಿಗೆ ಬಿತ್ತನೆ ಬೀಜವನ್ನು ಬೀಜೋತ್ಪಾದನಾ ಸಂಸ್ಥೆಗಳಿಂದ ಉತ್ಪಾದನೆ ಕೈಗೊಂಡು 2000ದ ಮುಂಗಾರು ಹಂಗಾಮಿಗೆ ರೈತರಿಗೆ ಒದಗಿಸಿಕೊಡಲು ಯೋಜನೆಯನ್ನು ರೂಪಿಸಲಾಗಿದೆ.

ರಾಜ್ಯದ 16 ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ನೆಲಗಡಲೆಯನ್ನು ಬೆಳೆಯುತ್ತಿದ್ದು, 1999ನೇ ಮುಂಗಾರಿನಲ್ಲಿ ದಕ್ಷಿಣ ಜಿಲ್ಲೆಗಳಾದ ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಮಾತ್ರ ಮುಂಗಾರು ನೆಲಗಡಲೆ ಬೀಜ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲದೆ ಪುನಃ ಮುಂಗಾರಿನಲ್ಲಿ ಬಿತ್ತನೆ ಕೈಗೊಳ್ಳಲು ಕೊರತೆ ಉಂಟಾಗಬಹುದೆಂದು ಹಾಗೂ ಒಟ್ಟಾರೆ ಮೂರು ಲಕ್ಷ ಕ್ವಿಂಟಾಲ್ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

2000ನೇ ವರ್ಷದ ಬೇಸಿಗೆ ಹಂಗಾಮಿನಲ್ಲಿ ಅದರಲ್ಲೂ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಎರಡು ಲಕ್ಷಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆ ಬೆಳೆಯಿದ್ದು, ಇದರಲ್ಲಿ ಸುಮಾರು 20,000 ಹೆಕ್ಟೇರ್ ಪ್ರದೇಶವನ್ನು ವಿವಿಧ ಜಿಲ್ಲೆಗಳಲ್ಲಿ ಗುರುತಿಸಿ ತಳಿ ಶುದ್ಧತೆ ಮಾಡಿ ಉತ್ಪಾದಿಸಿದ ನೆಲಗಡಲೆ ಬೀಜವನ್ನು ಬಿತ್ತನೆ ಬೀಜಕ್ಕೆ ಪೂರ್ಣವಾಗಿ ಬೆಳಸಿಕೊಳ್ಳಬಹುದು.

ದಕ್ಷಿಣ ಜಿಲ್ಲೆಗಳ ರೈತರಿಗೆ ನೀರಾವರಿ ಪ್ರದೇಶದಲ್ಲಿ ಬೇಸಿಗೆ ಹಂಗಾಮಿನಲ್ಲಿ ನೆಲಗಡಲೆ ಬೆಳೆದಿರುವ ತಾಲ್ಲೂಕುಗಳು ಮತ್ತು ಗ್ರಾಮದ ವಿವರಗಳನ್ನು ಒದಗಿಸಿಕೊಟ್ಟು ಸಹಕಾರ ಸಂಘಗಳ ಮುಕೇನ ಬಿತ್ತನೆ ಬೀಜವನ್ನು ರೈತರಿಂದ ರೈತರಿಗೆ ಕಡಿಮೆ ಖರ್ಚಿನಲ್ಲಿ ಒದಗಿಸಿಕೊಡಲು ಸಹ ಕ್ರಮಕೈಗೊಳ್ಳುವಂತೆ ಸಹಕಾರಿ ಇಲಾಕೆಯನ್ನು ಕೋರಲಾಗುವುದು.

ಹೊರ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲೂ ಸಹ ನೆಲಗಡಲೆ ಬೆಳೆ ಚೆನ್ನಾಗಿ ಬಾರದೇ ಇರುವುದು ತಿಳಿದು ಬಂದಿರುವುದರಿಂದ ಆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಬಿತ್ತನೆ ಬೀಜ ದೊರಕುವ ಸಂಭವ ಸಹ ಕಡಿಮೆ ಇದೆ. ಆ ರಾಜ್ಯಗಳೂ ಸಹ ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕದಲ್ಲಿ ಬೆಳೆದು ನೆಲಗಡಲೆ ಬಿತ್ತನೆ ಬೀಜವನ್ನು ರೈತರಿಂದ ನೇರವಾಗಿ ಖರೀದಿಸುವ ಸಂಭವಗಳು ಸಹ ಹೆಚ್ಚಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಪ್ರದೇಶದಲ್ಲಿ ಬೇಸಿಗೆ ಹಂಗಾಮಿನಲ್ಲಿ ಬೆಳೆದಿರುವ ನೆಲಗಡಲೆ ಕಾಯಿಯನ್ನು ಬಿತ್ತನೆ ಬೀಜಕ್ಕೆ ಬಳಸಿಕೊಳ್ಳಲು ಹಂಗಾಮಿನಲ್ಲಿ ಬೆಳೆದಿರುವ ನೆಲಗಡಲೆ ಕಾಯಿಯನ್ನು ಬಿತ್ತನೆ ಬೀಜಕ್ಕೆ ಬಳಸಿಕೊಳ್ಳಲು ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು. ಮುಖ್ಯವಾಗಿ ಬೇಸಿಗೆಯಲ್ಲಿ ನೆಲಗಡಲೆ ಬೆಳೆದಿರುವ ರೈತರ ಮನವೊಲಿಸಿ ದಕ್ಷಿಣ ಜಿಲ್ಲೆಗಳ ರೈತರಿಗೆ ಒದಗಿಸಿಕೊಡಲು ಪ್ರಚಾರ ಕಾರ್ಯವನ್ನೂ ಸಹ ಕೈಗೊಳ್ಳಲಾಗುವುದು.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೊರ ರಾಜ್ಯಗಳಿಂದ ಬಿತ್ತನೆ ಕಡಲೆಕಾಯಿ ಬೀಜಗಳನ್ನು ತಂದು ಸೊಸೈಟಿ ಮುಖಾಂತರ ಅದನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಆದರೆ, ಸಂಪೂರ್ಣ ನೂರಕ್ಕೆ ಎಂಭತ್ತು ಪರ್ಸ್ಂಟ್ ನಷ್ಟ ಕಡಲೆಕಾಯಿ ಬೆಳೆ ಮಳೆ ಇಲ್ಲದೇ ಹಾಳಾಗಿದೆ. ಆದುದರಿಂದ ರೈತರಿಗೆ ಸಬ್ಸಿಡಿ ರೂಪದಲ್ಲಿ ಅದನ್ನು ಕೊಡಬೇಕು ಎನ್ನತಕ್ಕ ಮಾತನ್ನು ನಾನು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ. ಏಕೆಂದರೆ, ಪೂರ್ಣ ಬೆಳೆ ಹಾಳಾಗಿರುವುದರಿಂದ ಕೇವಲ 20 ಪರ್ಸ್ಂಟ್ ಬೆಳೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಇವರು ಸೊಸೈಟಿಗಳ ಮುಖಾಂತರ ಕೊಡುತ್ತೇವೆಂದರೆ ರೈತರು ದುಡ್ಡನ್ನು ಎಲ್ಲಿಂದ ತರುತ್ತಾರೆ? ಇವತ್ತು ತೆಂಗಿನಕಾಯಿಗೆ ನುಸಿ ರೋಗ ಬಂದಿದೆ. ಪರಿಹಾರವಾಗಿ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಇಲ್ಲಿ ಮೆಣಸಿನಕಾಯಿ ಬೆಳೆ ಹಾಳಾಗಿದೆ, ಪರಿಹಾರವಾಗಿ ಇಷ್ಟು ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಆಲೂಗೆಡ್ಡೆ ಬೆಳೆ ನಷ್ಟ ಆಗಿದೆ, ಪರಿಹಾರವಾಗಿ ಇಷ್ಟು ಹಣ ಕೊಡುತ್ತೇವೆಂದು ಹೇಳುತ್ತಾರೆ. ಈಗ ಕಡಲೆಕಾಯಿ ಬೆಳೆಯತಕ್ಕಂಥ ಬಯಲು ಸೀಮೆಯಲ್ಲಿರುವ ರೈತರು ಏನು ಅನ್ಯಾಯ ಮಾಡಿದ್ದಾರೆ? ಇವರುಗಳಿಗೆ ಸೊಸೈಟಿಗಳ ಮುಖಾಂತರ ಕೊಡುತ್ತೇವೆಂದರೆ, ಅದನ್ನು ಯಾವ ರೀತಿ ಕೊಡುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಈ ಸದನಕ್ಕೆ ತಿಳಿಸಬೇಕಾಗುತ್ತದೆ.

+ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಜ್ಯದ ಅನೇಕ ಪ್ರದೇಶಗಳ ಕಡಲೆಕಾಯಿಯನ್ನು ಬೆಳೆಯುತ್ತಿದ್ದು ಕಳೆದ ವರ್ಷ ಈ ಬೆಳೆ ಸಂಪೂರ್ಣವಾಗಿ ವಿಫಲವಾದ್ದರಿಂದ ರೈತರಿಗೆ ಉಂಟಾಗಿರುವ ತೊಂದರೆ ಮತ್ತು ಆ ದಿಸೆಯಲ್ಲಿ ಈ ವರ್ಷ ನಮಗೆ ಬಿತ್ತನೆ ಬೀಜ ಸಿಗುತ್ತಿಲ್ಲ ಎನ್ನುವುದರ ಬಗ್ಗೆ ಸರ್ಕಾರದ ಗಮನವನ್ನು ಮತ್ತು ಮಾನ್ಯ ಕೃಷಿ ಸಚಿವರ ಗಮನವನ್ನು ನಾವು ಸೆಳೆದಿದ್ದೇವೆ. ಸನ್ಮಾನ್ಯ ಸಚಿವರ ಉತ್ತರವನ್ನು ನೋಡಿದಾಗ ನಾವು ಯಾವ

ಹಿನ್ನಲೆಯಲ್ಲಿ ಈ ಒಂದು ಪ್ರಸ್ತಾವವನ್ನು ಮಾಡಿದ್ದೇವೆ, ಆ ಹಿನ್ನಲೆಯಲ್ಲಿ ರೈತರಿಗೆ ಯಾವುದೇ ರೀತಿಯಾದಂತಹ ಅನುಕೂಲ ಆಗುತ್ತದೆ ಎನ್ನುವಂತಹ ಸಮಾಧಾನ ಸಚಿವರ ಹೇಳಿಕೆಯಲ್ಲಿ ಇಲ್ಲ ಇವತ್ತು ಏನಾಗಿದೆ ಎಂದರೆ, ಸಾಂಪ್ರದಾಯಿಕವಾದಂತಹ ಕಡಲೆಕಾಯಿ ಬೆಳೆಯನ್ನು ರಾಜ್ಯದಲ್ಲಿ ಸುಮಾರು 12- 13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದುಕೊಂಡಿದ್ದರಿಂದ ಸಂಪೂರ್ಣವಾಗಿ ಅದನ್ನೇ ನಂಬಿಕೊಂಡಿದ್ದಂಥ ರೈತರ ಗತಿ ಇವೊತ್ತು ಏನಾಗಬೇಕು? ಬಳ್ಳಾರಿಯಲ್ಲಿ ಮೆಣಸಿನಕಾಯಿ ಬೆಳೆ ವಿಫಲ ಆಯಿತು ಎಂದು ನೀವು ಅಲ್ಲಿ ಪರಿಹಾರವನ್ನು ಕೊಟ್ಟಿರಿ, ಸಂತೋಷ. ಅಲ್ಲೂ ನಮ್ಮ ಅಣ್ಣ ತಮ್ಮಂದಿರಾದ ರೈತರು ಇದ್ದಾರೆ. ನೀವು ಪರಿಹಾರವನ್ನು ಕೊಟ್ಟಿದ್ದೀರಿ, ಸಂತೋಷ. ಆದರೆ, ಕಳೆದ ವರ್ಷ ಸಂಪೂರ್ಣವಾಗಿ ಕಡಲೆಕಾಯಿಯನ್ನೇ ನಂಬಿಕೊಂಡಿದ್ದಂತಹ ಈ ರೈತರು ಸಂಪೂರ್ಣವಾಗಿ ತಾವು ಬೆಳೆದ ಬೆಳೆಯನ್ನೇ ಕಳೆದುಕೊಂಡ ಮೇಲೆ ಅವರಿಗೆ ಪರಿಹಾರವನ್ನು ತಾವು ಕೊಡಲಿಕ್ಕೆ ಏನಾದರೂ ಚಿಂತನೆ ಮಾಡಿದ್ದೀರೋ? ಇದು ತುಂಬಾ ಅವಶ್ಯಕತೆ ಇದೆ. ಇವೊತ್ತು ಜೀವನವನ್ನು ಸಾಗಿಸುವುದಾದರೂ ಹೇಗೆ? ಆದ್ದರಿಂದ ದಯಮಾಡಿ ಸರ್ಕಾರ ಈ ಬಗ್ಗೆ ಬಹಳ ತೀವ್ರತರವಾದಂತಹ ಆಲೋಚನೆಯನ್ನು ಮಾಡಬೇಕಾಗುತ್ತದೆ. ಏನು ಸಂಪೂರ್ಣವಾಗಿ ಬೆಳೆ ನಷ್ಟ ಆಗಿದೆ, ಅದಕ್ಕೆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಕೂಡ ತಾವು ಮಾಡಬೇಕು. ಮತ್ತೆ ಈಗೇನಾಗಿದೆ ಎಂದರೆ, ಬಿತ್ತನೆ ಬೀಜ ಸರಿಯಾಗಿ ಸಿಗುತ್ತಿಲ್ಲವೆಂದು ತಾವೇ ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದೀರಿ. ಆದರೆ, ಈ ಬಿತ್ತನೆ ಬೀಜವನ್ನು ನಾವು ಸಮರ್ಪಕವಾಗಿ ಇಲ್ಲ ಒದಗಿಸುತೇವೆ ಎನ್ನುವುದರ ಬಗ್ಗೆ ತಾವು ಯಾವುದೇ ಒಂದು ಖಚಿತವಾದಂತಹ ಆಶ್ವಾಸನೆಯನ್ನು ಕೊಡಲಿಲ್ಲ. ಈಗ ನಾವೇನು ಮಾಡಬೇಕು? ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ನಿಮ್ಮ ಪ್ರಕಾರ ಬಿತ್ತನೆ ಬೀಜ ಇಲ್ಲ . ಅಲ್ಲದೇ ತಮಿಳುನಾಡಿನಲ್ಲಿ ಇಲ್ಲ ಎಂದಾದಮೇಲೆ ಇಲ್ಲ ಸಂಪೂರ್ಣವಾಗಿ ಅದನ್ನೇ ನಂಬಿಕೊಂಡಿರತಕ್ಕಂಥ ರೈತರ ಗತಿ ಏನು? ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂಬುದನ್ನು ನೀವು ಹೇಳಿ? ಯಾವ ರೀತಿ ಬಿತ್ತನೆ ಬೀಜಗಳನ್ನು ನೀವು ಕೊಡುತ್ತೀರಿ? ಈ ವರ್ಷದ ಬೆಳೆಗೆ ನಮಗೆ ಬಿತ್ತನೆ ಬೀಜವನ್ನು ಕೊಡುವ ಬಗ್ಗೆ ಖಾತ್ರಿ ಏನು? ಈಗ ನೀವು ಏನು ಹೇಳುತ್ತೀರಿ ಎಂಬುದು ನನಗೆ ಬಹಳ ಮುಖ್ಯ. ಏಕೆಂದರೆ, ಹೋದ ಸಾರಿ ಮಳೆ ಬಾರದೇ ಬೆಳೆ ವಿಫಲ ಆಯಿತು ಈ ಸಾರಿ ಬೀಜ ಬರದೇ ಈ ಬೆಳೆ ವಿಫಲವಾದರೆ ಆ ಪ್ರದೇಶದ ರೈತರ ಗತಿ ಏನಾಗಬೇಕು? ಇದರ ಬಗ್ಗೆ ಸರ್ಕಾರ ಖಚಿತವಾದಂತಹ ಉತ್ತರ ಕೊಡಬೇಕು. ನೀವು ಬಿತ್ತನೆ ಬೀಜವನ್ನು ಎಲ್ಲಿಂದ ತರುತ್ತೀರೋ, ಹೇಗೆ ತರುತ್ತೀರೋ ಅದು ನಮಗೆ ಗೊತ್ತಿಲ್ಲ. ಇವತ್ತು ಈ ಭಾಗದಲ್ಲಿರತಕ್ಕಂತಹ ಕಡಲೆಕಾಯಿ ಬೆಳೆಯುತ್ತಿರುವಂತಹ ರೈತರ ಜೀವನ್ಮರಣದ ಪ್ರಶ್ನೆ ಇದಾಗಿದೆ. ಈ ವರ್ಷ ಏನಾದರೂ ಕೂಡ ಕಳೆದಬಾರಿ ಆಗಿರತಕ್ಕಂತಹ ನಷ್ಟವನ್ನು ಪರಿಹಾರ ಮಾಡತಕ್ಕ ದಿಸೆಯಲ್ಲಿ ಸಂಪೂರ್ಣವಾಗಿ ಅವರಿಗೆ ಸಾಕಷ್ಟು ಬಿತ್ತನೆ ಬೀಜವನ್ನು ಕೊಡದೇ ಹೋದರೆ ಬಹುಶ: ಈ ಬೆಳೆಯನ್ನೇ ನಂಬಿಕೊಂಡಿರತಕ್ಕಂಥ ರೈತರ ಜೀವನ, ಅವರ ಸಂಸಾರಗಳು ಹಾಳಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ; ಇದು ಮೊದಲನೆಯದು ಇನ್ನು ಎರಡನೆಯದಾಗಿ, ಮಾನ್ಯ ಕೃಷಿ ಸಚಿವರು ತಾವು ಯುವಕರಾಗಿದ್ದು ಬಹಳ ಆಸಕ್ತಿಯಿಂದ ಇಲಾಖೆ ಬಗ್ಗೆ ಕೆಲಸವನ್ನು ಮಾಡುತ್ತಿರುವುದು ನಮಗೆ ಸಂತೋಷವಾಗಿದೆ. ನಾವೇನು ಹೇಳುತ್ತೇವೆಂದರೆ, ಈ ಸಾಂಪ್ರದಾಯಿಕ ಬೆಳೆಯನ್ನು ನಾವು ಸುಮಾರು 12- 13 ಲಕ್ಷ ಹೆಕ್ಟೆರ್‌ಗಳ ಪ್ರದೇಶದಲ್ಲಿ ನಮ್ಮ ರಾಜ್ಯದಲ್ಲಿ ಬೆಳೆಯುತ್ತಿದ್ದೇವೆ.

ನಿಮ್ಮ ಕೃಷಿ ಇಲಾಖೆ ಇದೆ, ಕೃಷಿ ವಿಜ್ಞಾನಿಗಳಿದ್ದಾರಲ್ಲ, You are investing lot of money over these laboratories, ನಿಮ್ಮ ಕೃಷಿ ವಿಜ್ಞಾನಿಗಳು ಏನು ಮಾಡುತ್ತಿದ್ದಾರೆ? ನೀವು ಎಷ್ಟು ತಳಿಗಳನ್ನು ಕಂಡುಹಿಡಿದಿದ್ದೀರಿ? ಕಳೆದ ವರ್ಷ ನಾವು ಹಿಂದಿನ ಸರ್ಕಾರದಲ್ಲಿ ಕಡಲೆಕಾಯಿ ಬೆಳೆ ಬಗ್ಗೆ ಪ್ರಸ್ತಾಪ ಮಾಡಿದರೂ ಆ ಸರ್ಕಾರದವರು ಏನೂ ಮಾಡಲಿಲ್ಲ. ಇವ್ವೊತ್ತು ರಾಜ್ಯದ ಸುಮಾರು 12-13 ಲಕ್ಷಗಳಷ್ಟು ಹೆಕ್ಟೇರ್ ಪ್ರದೇಶದಲ್ಲಿ ಕಡಲೆಕಾಯಿ ಬೆಳೆಯನ್ನು ಬೆಳೆಯುತ್ತಿದ್ದರೂ ಇದುವರೆವಿಗೂ ನೀವು ಹೊಸ ತಳಿಯನ್ನು ಕಂಡುಹಿಡಿಯಲಿಲ್ಲ. ಸಾಂಪ್ರದಾಯಿಕವಾದ ಹಳೆಯ ಬಿತ್ತನೆ ಕಡಲೆಕಾಯಿ ಬೀಜವನ್ನೇ ಬಿತ್ತುಕೊಂಡು ಹೋಗುತ್ತಿದ್ದೇವೆ. ಈ ಬಗ್ಗೆ ನೀವು ಯಾವುದೇ ಚಿಂತನೆ ಮಾಡುತ್ತಿಲ್ಲ. The gap between these laboratories and the land is too wide ನಿಮ್ಮ ಕೃಷಿ ವಿಜ್ಞಾನಿಗಳು ಕಛೇರಿಯಲ್ಲಿ, ಪ್ರಯೋಗಶಾಲೆಯಲ್ಲಿ ಕುಳಿತುಕೊಂಡು ಕೆಲಸ ಮಾಡಿದರೆ ಆಗುವುದಿಲ್ಲ. ಅವರು ಫೀಲ್ಡ್‌ಗೆ ಹೋಗಿ ರೈತರ ಸಂಕಷ್ಟ ಏನಿದೆ ಎಂಬುದನ್ನು ಕಂಡುಕೊಳ್ಳಬೇಕು ಮತ್ತು ಬಿತ್ತನೆ ಕಡಲೆಕಾಯಿ ಬೀಜವನ್ನು ರೈತರು ಏನು ನಷ್ಟ ಮಾಡಿಕೊಂಡಿದ್ದಾರೆ, ಅಲ್ಲಿ ಬೀಳು ಕಡಿಮೆ ಪ್ರಮಾಣದ ಮಳೆಯಲ್ಲಿ ಅವರು ಬೇರೆ ರೀತಿಯ ಕಡಲೆಕಾಯಿ ಬೆಳೆಯನ್ನು ಬೆಳೆಯಲು ಸಾಧ್ಯವೇ ಎಂಬುದರ ಕುರಿತು ನಿಮ್ಮ ಕೃಷಿ ವಿಜ್ಞಾನಿಗಳು ಚಿಂತಿಸಬೇಕು. ತಾವು ಇನ್ನೂ ಯುವಕರಿದ್ದೀರಿ, My advise is try to lessen the gap between the laboratory and the land. ಇದು ಬಹಳ ಅವಶ್ಯಕತೆಯಿದೆ. ಇದರ ಜೊತೆಗೆ ನೀವು ಏನಾದರೂ ಮಾಡಿ ಬಿತ್ತನೆ ಕಡಲೆಕಾಯಿ ಬೀಜವನ್ನು ರೈತರುಗಳಿಗೆ ಸರಿಯಾದ ಪ್ರಮಾಣದಲಿಲ ಒದಗಿಸಿಕೊಡದೆ ಹೋದಲ್ಲಿ ಈ ವರ್ಷ ಅವರುಗಳಿಗೆ ಬಹಳ ತೊಂದರೆಯಾಗುವುದಲ್ಲದೆ ಇದೊಂದು ಬೆಳೆಯನ್ನೇ ನಂಬಿಕೊಂಡಿರುವ ರೈತರ ಮನೆಗಳೆಲ್ಲವೂ ಹಾಳಾಗುತ್ತವೆ. ಆದುದರಿಂದ, ನೀವು ಪರಿಹಾರ ಕೊಡುವಕ್ಕಿಂತಾದ್ದು ಮತ್ತು ಸಮರ್ಪಕವಾಗಿ ರೈತರಿಗೆ ಬಿತ್ತನೆ ಕಡಲೆಕಾಯಿ ಬೀಜಗಳನ್ನು ಸರಬರಾಜು ಮಾಡುವ ಬಗ್ಗೆ ಸರ್ಕಾರದ ನಿರ್ದಿಷ್ಟ ಕಾರ್ಯಕ್ರಮಗಳೇನು ಎಂಬುದರ ಕುರಿತು ತಾವು ಉತ್ತರಿಸಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುತ್ತೇನೆ.

+ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಉಪಾಧ್ಯಕ್ಷರೆ, ತುಮಕೂರು ಜಿಲ್ಲೆ ಕುರಿತು ಹೇಳುವುದಾದರೆ, ಕಳೆದ ನಾಲ್ಕು ತಿಂಗಳುಗಳ ಹಿಂದೆ ಜಿಲ್ಲಾ ಪಂಚಾಯಿತಿಯಲ್ಲಿ ನಾವುಗಳು ಸಭೆ ಸೇರಿದಂಥ ಸಂದರ್ಭದಲ್ಲಿ ಮಾನ್ಯ ಸಚಿವರೂ ಸಹ ಭಾಗವಹಿಸಿದ್ದರು. ಅಂದಿನ ಸಭೆಯಲ್ಲಿ ನಾವು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ನೀರಾವರಿ ಇಲ್ಲದಿರುವಂಥ ಕೇವಲ ಮಳೆ ನೀರನ್ನೇ ಆಶ್ರಯಿಸಿ ಜೀವನ ಸಾಗಿಸುತ್ತಿರುವ ರೈತರುಗಳು ಈ ಜಿಲ್ಲೆಯಲ್ಲಿದ್ದು ಕಳೆದ ವರ್ಷ ಅವರು ಹಾಕಿದ್ದ ಬಿತ್ತನೆ ಕಡಲೆಕಾಯಿ ಬೀಜ ನಷ್ಟವಾಗಿ ಒಂದು ಸೇರು ಕಡಲೆಕಾಯಿಬೀಜ ಬೆಳೆಯುವುದಕ್ಕಾಗದೆ ತೊಂದರೆಯುಂಟಾಗಿದೆಯೆಂದು ಅವರನ್ನು ಕೇಳಿಕೊಂಡಾಗ ಅವರು ಬಿತ್ತನೆ ಕಡಲೆಕಾಯಿ ಬೀಜಗಳನ್ನು ಸೊಸೈಟಿ ಮುಖಾಂತರ, ಆಂಧ್ರಪ್ರದೇಶದಿಂದ ತರಿಸಿಕೊಡುವುದಲ್ಲದೆ, ಈ ಬೆಳೆಗೆ ಸಬ್ಸಿಡಿಯನ್ನೂ ಸಹ ಒದಗಿಸಿ ಕೊಡುವುದಾಗಿ ಭರವಸೆ ಕೊಟ್ಟರು. ಆ ರೀತಿ ಭರವಸೆ ಕೊಟ್ಟು ನಾಲ್ಕೈದು ತಿಂಗಳುಗಳಾದರೂ ಆ ಬಗ್ಗೆ ಯಾವುದೇ ರೀತಿಯಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಮಾನ್ಯ ಕೃಷಿ ಸಚಿವರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ರೈತರ ಸಂಕಷ್ಟಗಳಿಗೆ ಸ್ಪಂದಿಸುತ್ತಾರೆ, ಇದು ಒಪ್ಪಿಕೊಳ್ಳುವ ವಿಚಾರವಾಗಿದೆ. ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಹೇಳಿದಂತೆ ರೈತರುಗಳಿಗೆ ಉಚಿತವಾಗಿ ಬಿತ್ತನೆ ಕಡಲೆಕಾಯಿ ಬೀಜಗಳನ್ನು

ವಿತರಿಸಬೇಕು. ಏಕೆಂದರೆ, ರೈತರ ಬಡವರಾಗಿದ್ದು ಅವರುಗಳಿಗೆ ಬೇರೆ ಆದಾಯದ ಮೂಲವಿರುವುದಿಲ್ಲ. ಅವರುಗಳಿಗೆ ಕೃಷಿ ಮಾಡಲು ನದಿ ನೀರಿನ ಸೌಕರ್ಯವಾಗಲೀ, ನೀರಾವರಿ ಸೌಕರ್ಯವಾಗಲೀ ಇರದೆ, ಅಲ್ಲಿ ಮಳೆಯೂ ಬಾರದಿರುವುದರಿಂದ ತುಂಬಾ ಕಷ್ಟಕ್ಕೊಳಗಾಗಿರುವುದರಿಂದ ರೈತರುಗಳಿಗೆ ಬಹಳ ಅನಾನುಕೂಲವಾಗಿದೆ. ಸಿರಾ, ಮಧುಗಿರಿ, ಪಾವಗಡ ಇಲ್ಲವೇ ತುಮಕೂರು ಜಿಲ್ಲೆಯ ಯಾವುದೇ ಭಾಗವಿರಬಹುದು ನೀರಾವರಿ ಇಲ್ಲದಿರುವ ಕಾರಣ ರೈತರು ತೀವ್ರ ತೊಂದರೆಗೊಳಗಾಗಿರುವುದರಿಂದ ಅವರಿಗೆ ಅನುಕೂಲವಾಗುವ ವಿಸೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರುಗಳಾದ ವೆಂಕಟರಮಣಪ್ಪ ಮತ್ತು ಎಸ್.ಪಿ. ಮುದ್ದಹನುಮೇಗೌಡರು ಮಾತನಾಡಿ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಬಹುಶ: ಅವರುಗಳ ಎಲ್ಲಾ ಪ್ರಶ್ನೆಗಳಿಗೆ ಮೂಲವಾಗಿ ವಸ್ತುಸ್ಥಿತಿ ಏನಿದೆಯೆಂಬುದನ್ನು ಕೂಡ ಹೇಳಬೇಕಾಗುತ್ತದೆ. ನಾವು ವಸ್ತುಸ್ಥಿತಿಯನ್ನು ಏನಿದೆಯೆಂಬುದನ್ನು ಕೂಡ ಹೇಳಬೇಕಾಗುತ್ತದೆ. ನಾವು ವಸ್ತುಸ್ಥಿತಿಯನ್ನು ಹೇಳುವ ಮೂಲಕ ಈ ಸಭೆಯ ಮುಖೇನ ಈ ರಾಜ್ಯದ ಜನರಿಗೆ ಅದರಲ್ಲೂ ಶೇಂಗಾ ಬೆಳೆಯುವ ಬೆಳೆಗಾರರಿಗೆ ವಿಷಯ ತಲುಪಬೇಕಾಗುತ್ತದೆ. ಈಗಾಗಲೇ ನಾನು ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸುಮಾರು ಹದಿನೈದು ಕ್ವಿಂಟಾಲ್‌ನಷ್ಟು ಬಿತ್ತನೆ ಕಡಲೆಕಾಯಿ ಬೀಜ ಬೇಕಾಗುತ್ತದೆ. ಕೇಂದ್ರ ಸರ್ಕಾರದ ನಿಯಮದ ರೀತ್ಯ ಶೇಕಡ 10ರಷ್ಟು ರಿಪ್ಲೇಸ್‌ಮೆಂಟ್ ಎನ್ನುವ ರೀತಿಯಲ್ಲಿ ಹೋಗುವುದಾದರೆ ಸುಮಾರು ಒಂದೂವರೆ ಲಕ್ಷ ಕ್ವಿಂಟಾಲ್‌ನಷ್ಟು ಬಿತ್ತನೆ ಬೀಜ ಬೇಕಾಗುತ್ತದೆ. ಮತ್ತು ಅದೇ ಸಂದರ್ಭದಲ್ಲಿ ನಮ್ಮಲ್ಲಿ ಎಷ್ಟು ದಾಸ್ತಾನು ಇದೆಯೆಂಬುದನ್ನೂ ಸಹ ನಾವು ಗಮನಿಸಬೇಕಾಗುತ್ತದೆ. ಖಾಡಿಕೆಯಂತೆ ಪ್ರತಿಷತ್ನ ಕೂಡ ಕರ್ನಾಟಕ ಸ್ಟೇಟ್ ಸೀಡ್ಸ್ ಕಾರ್ಪೊರೇಷನ್, ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್, ಕೆ ಓ.ಎಫ್. ಮತ್ತು ಖಾಸಗಿ ಸಂಸ್ಥೆ ಮುಖೇನ ಸುಮಾರು ನಲವತ್ತಾರು ಸಾವಿರ ಕ್ವಿಂಟಾಲ್‌ನಷ್ಟು ಬಿತ್ತನೆ ಬೀಜ ಇವೊತ್ತು ನಮ್ಮಲ್ಲಿ ದಾಸ್ತಾನು ಇದೆ. ಈಗ ಉದ್ಭವಿಸಿರುವ ಪ್ರಶ್ನೆ ಬಗ್ಗೆ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯ ನಿಜ. ಮುಂಗಾರಿನ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿಯೇ ಎಣ್ಣೆಕಾಳು ಬೆಳೆಗಾರರಿಗೆ ಒಂದಲ್ಲ ಒಂದು ರೀತಿ ಹೊಡೆತ ಬಿದ್ದು ಸುಮಾರು ಶೇಕಡ 70-80 ಭಾಗದಷ್ಟು ಕಡಲೆಕಾಯಿ ಬೆಳೆ ಹಾಳಾಗಿರುವುದು ನಿಜ. ಇವೊತ್ತು ಸದರಿ ಬೆಳೆ ಶೇಕಡ 50-70ರಷ್ಟು ಮೀರಿ ನಾಶವಾದಾಗ ರೈತರುಗಳಿಗೆ ಯಾವ ರೀತಿಯಾಗಿ ಪರಿಹಾರ ಕೊಡಬೇಕೆನ್ನುವುದರ ಬಗ್ಗೆ ಈಗಾಗಲೇ ನಾವು ಹಾಗೂ ಕೃಷಿ ಇಲಾಖೆಯವರು ಸೇರಿಕೊಂಡು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದ್ದೇವೆ. ಈಗ ಮುಖ್ಯವಾಗಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ನಾಳೆ ಮುಂಗಾರಿಗೆ ಬಿತ್ತನೆ ಬೀಜ ಏನು? ಎಂಬುದೇ ಆಗಿದೆ. ರಾಜ್ಯದಲ್ಲಿ ಈಗಾಗಲೇ ಎರಡು ಲಕ್ಷದಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ಶೇಂಗಾ ಬೆಳೆ ಇನ್ನು 15-20 ದಿವಸಗಳಲ್ಲಿ ಕುಯಿಲಿಗೆ (ಹಾರ್ವೆಸ್ಟ್‌ಗೆ) ಬರುವುದಿದ್ದು, ಈ ರೀತಿ ಕೊಯಿಲಿಗೆ ಬರುವ ಸಮ್ಮರ್ ಕ್ರಾಪ್ ಏನಿದೆ, ಅದು ಉತ್ಕೃಷ್ಟವಾಗಿದೆ ಮತ್ತು ಆಶಾದಾಯಕವಾಗಿದೆ. ಮುಂಗಾರಿಗೆ ಬಿತ್ತನೆ ಬೀಜ ಸಿಗುವುದಿಲ್ಲವೆಂಬ ನಮ್ಮ ಮೂಲಭೂತ ಅನುಮಾನವೇನಿತ್ತು, ಇದಕ್ಕೆ ಇವೊತ್ತು ಪರಿಹಾರ ಸಿಕ್ಕಿದೆ. ಇವೊತ್ತು ಸಾಕಷ್ಟು ಪ್ರಾಣದಲ್ಲಿ ನಮಗೆ ಬಿತ್ತನೆ ಬೀಜ ಸಿಗತಕ್ಕಂಥ ಮಟ್ಟಕ್ಕೆ ಹೋಗಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ವಾಸ್ತವಿಕವಾಗಿ ವರ್ಷ ವರ್ಷಕ್ಕೂ ಕೂಡ ಬಿತ್ತನೆ ಬೀಜ ಬೆಳೆಯತಕ್ಕಂಥ ಏಕರೆವಾರು ಪ್ರದೇಶ ಕಡಿಮೆಯಾಗುತ್ತಿದೆ.

ಇದಕ್ಕೆ ಕಾರಣ ರೈತ ಬೆಳೆದಂಥ ಬೆಳೆಗೆ ಸೂಕ್ತ ಬೆಲೆ ಸಿಗದಿರುವಂಥಾದ್ದು ಎಲ್ಲರಿಗೂ ಕೂಡ ತಿಳಿದೇ ಇದೆ. ಇನ್ನು ಒಂದು ಕಡೆಯಾದರೆ ಮತ್ತೊಂದೆಡೆ ಶೇಂಗಾ ಬೆಳೆಗೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಸಿಗದಿರುವುದು ಹಾಗೂ ಮಾರುಕಟ್ಟೆಯಲ್ಲಿನ ಧಾರಣೆ ವ್ಯವಸ್ಥೆಯಾ ಈ ಬೆಳೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದಕ್ಕೆ ಕಾರಣವಾಗಿದೆಯೆಂದರೆ ತಪ್ಪಾಗಲಾರದು. ಆದರೆ, ಇದಕ್ಕೆ ಪರಿಹಾರವಾಗಿ ಏನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎಂದು ಮಾನ್ಯ ಸದಸ್ಯರುಗಳು ತಮ್ಮ ಅನುಮಾನ ವ್ಯಕ್ತಪಡಿಸಿದ್ದಾರೆ. ಪರಿಹಾರವೇನೆಂದರೆ, ಶೇಂಗಾ ಒಂದು ಪಕ್ಷ ದುಬಾರಿಯಾದಂಥ ಸಂದರ್ಭದಲ್ಲಿ ಪರ್ಯಾಯ ಬೆಳೆಯಾಗಿ ಒಂದೊಂದು ಆಗ್ರೋ ಕ್ಲೈಮೆಟಿಕ್ ಝೋನ್ಸ್‌ಗೂ ಕೂಡ ಯಾವ್ಯಾವ ರೀತಿಯ ಬೆಳೆ ಹಾಕಬೇಕೆಂಬುದರ ಬಗ್ಗೆ ಈಗಾಗಲೇ ಸಂಶೋಧನೆ ಕೈಗೊಂಡಿದ್ದು, ನಮ್ಮ ಕೃಷಿ ವಿಜ್ಞಾನಿಗಳೊಂದಿಗೆ ಚರ್ಚಿಸಿ ನಮ್ಮ ಇಲಾಖೆ ಮುಖಾಂತರ ಪ್ರಚಾರಪಡಿಸುವ ಕೆಲಸವನ್ನು ಕೂಡ ನಾವು ಮಾಡಿದ್ದೇವೆ. ಈ ದಿಸೆಯಲ್ಲಿ ಈಗಾಗಲೇ ತುಮಕೂರು, ಕೋಲಾರ ಮತ್ತು ಬೆಂಗಳೂರು ಹೊರವಲಯದ ಪ್ರದೇಶಗಳಲ್ಲಿ ರಾಗಿ, ಸೂರ್ಯಕಾಂತಿ ಮತ್ತು ಇಂಡಾಪ್ ನ ಯಾವ್ಯಾವ ತಳಿಗಳನ್ನು ಬೆಳೆಸಬೇಕೆಂಬ ಬಗ್ಗೆ ಮತ್ತು ಅದೇ ರೀತಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಮತ್ತು ಚಿಕ್ಕಮಗಳೂರಿನ ಭಾಗಗಳಲ್ಲಿ ತೊಗರಿ, ಮೆಕ್ಕೆಜೋಳವನ್ನು ಯಾವ ಪ್ರಮಾಣದಲ್ಲಿ ಬೆಳೆಯಬಹುದೆಂಬುದರ ಬಗ್ಗೆ ಮಾಹಿತಿಯನ್ನು ನಮ್ಮ ಎಕ್ಸ್‌ಟೆನ್ಷನ್ ಮುಖಾಂತರ ರೈತರುಗಳಿಗೆ ಕೊಡುವ ಕೆಲಸವನ್ನು ಮಾಡಿದ್ದೇವೆ. ಆದರೆ, ಬಹಳ ಮುಖ್ಯವಾಗಿರುವುದೇನೆಂದರೆ, ಮಾನ್ಯ ಸದಸ್ಯರಾದ ತಾವೇ ಸ್ವತಃ ಶೇಂಗಾ ಬೆಳೆಗಾರರಾಗಿದ್ದು ಈ ಬೆಳೆ ಬಗ್ಗೆ ಸಂಶೋಧನೆಯಲ್ಲಿ ಹೆಚ್ಚು ಆಸಕ್ತಿದಾಯಕವಾದ ಕೆಲಸವಾಗಿಲ್ಲವೆಂದು ತಾವು ಏನು ಹೇಳುತ್ತಿದ್ದೀರಿ, ರಾಜ್ಯದ ಕೃಷಿ ಸಚಿವನಾಗಿ ನಾನು ತಮ್ಮ ಮಾತನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಈಗಾಗಲೇ ತಮಗೆಲ್ಲರಿಗೂ ಗೊತ್ತಿರುವಂತೆ ಡಿಎಂವಿ-2 ಬಿಟ್ಟರೆ ಬೇರಾವುದೇ ತಳಿಗಳನ್ನು ನಮ್ಮ ರೈತರು ಉಪಯೋಗಿಸುತ್ತಿಲ್ಲ. ಯಾವುದೇ ತಳಿಗಳು ಇನ್ನೂ ಜಿಡುಗಡೆಯಾಗಿಲ್ಲದಿರುವುದನ್ನು ಸರ್ಕಾರ ಮನಗಂಡಿದೆ. ನಾವು ಈಗಾಗಲೇ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಎಣ್ಣೆಕಾಳುಗಳ ಬೆಳೆಯಲ್ಲಿ ಬಹಳ ಹಿಂದುಳಿದಿದ್ದು, ಇನ್ನೂ ಸಾಕಷ್ಟು ರೀತಿಯಲ್ಲಿ ಇದಕ್ಕೆ ಪ್ರೋತ್ಸಾಹ ಕೊಡುವಂಥ ಜವಾಬ್ದಾರಿಯಿರುವುದರಿಂದ ನಾವು ಇತ್ತ ವಿಶೇಷ ಗಮನಹರಿಸಿ ಸಂಶೋಧನೆಯನ್ನು ಮತ್ತಷ್ಟು ಚುರುಕುಗೊಳಿಸಿ ಹೊಸ ತಳಿಗಳನ್ನು ಬಿಡುಗಡೆ ಮಾಡುವುದರ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಬಹುಶಃ ನಾನು ಈ ಮಾತನ್ನು ವಿಧಾನಸಭೆಯಲ್ಲಿ ಹೇಳಿದಾಗ ಕಳೆದ ಮೂರಾಕ್ಕು ವರ್ಷಗಳಿಂದ ಇದು ಎಲ್ಲರೂ ಕೂಡ ಹೇಳಿರುವಂಥ ಮಾತಾಗಿದ್ದು ಈ ಕುರಿತು ಏನೂ ಆಗಿಲ್ಲವೆಂದು ತಿಳಿಸಿದ್ದೀರಿ. ಇದನ್ನು ಮನಗಂಡೇ ದೇಶದಲ್ಲಿರುವ ಹೊಸ ತಳಿಗಳನ್ನು ನಾವು ನಮ್ಮ ರಾಜ್ಯಕ್ಕೆ ತಂದು ಇಲ್ಲಿ ಪ್ರಯೋಗಿಸುವುದು ಬಹಳ ಮುಖ್ಯವಾಗಿದೆ. ಕಡಲೆಕಾಯಿ ಬೆಳೆಯಲ್ಲಿ ಎಷ್ಟು ತಳಿಗಳಿವೆಯೆಂದರೆ, ಜರ್ಮ್ ಪ್ಲಾಸ್ಮ್ ಹಿಸ್ಪರಿಯತ್ತ ನಾವು ಹೋಗುವುದಾದರೆ ಸುಮಾರು ಏಳು ಸಾವಿರದಷ್ಟು ತಳಿಗಳಿವೆ. ನಮ್ಮಲ್ಲಿ ವಾಡಿಕೆಯಲ್ಲಿ ಇಲ್ಲದಿರುವುದೇ ಏಳು ಸಾವಿರದಷ್ಟು ಇಲಿಗಳು. ಆದರೆ, ನಮ್ಮ ರಾಜ್ಯದಲ್ಲಿ ಪ್ರಖ್ಯಾತವಾಗಿರುವುದು ಕೇವಲ 2-3 ತಳಿಗಳು ಮಾತ್ರ. ಹೊಸ ತಳಿಗಳನ್ನು ಇಲ್ಲಿಗೆ ತಂದು ಪ್ರಯೋಗಿಸುವ ಕೆಲಸ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಸಂಶೋಧನಾ ಮಟ್ಟದಲ್ಲಿ ಮತ್ತು ಇಲಾಖೆಯ ಮಟ್ಟದಲ್ಲಿ ಜರುಗುತ್ತಿರುವ ಕಾರ್ಯವನ್ನು ಕೂಡ ಚುರುಕುಗೊಳಿಸಲು ಸರ್ಕಾರ ಅತ್ತ ಕಡೆ ಗಮನ ಕೊಡುತ್ತದೆಂಬ ಮಾತನ್ನು ಹೇಳುತ್ತಾ, ಮಾನ್ಯ ಸದಸ್ಯರಾದ ವೆಂಕಟರಮಣಪ್ಪನವರು ಮಾತನಾಡಿ ಇವೊತ್ತು ರೈತರಿಗೆ ಸಬ್ಸಿಡಿ ದರದಲ್ಲಿ ಶೇಂಗಾ ಬಿತ್ತನೆ ಬೀಜವನ್ನು ಒದಗಿಸಿಕೊಡಬೇಕೆಂದು ಕೇಳಿರುವ ಬಗ್ಗೆ

ಹೇಳುವುದಾದರೆ, ಈ ಕುರಿತು ರೈತರ ಬಗೆಗಿನ ಕಳಕಳಿಯನ್ನು ನಾನು ನಿಜವಾಗಿಯೂ ಒಪ್ಪುತ್ತೇನೆ. ಬಿತ್ತನೆ ಬೀಜ ಕುರಿತಂತೆ ರೈತರ ಸಮಸ್ಯೆ ಏನಿದೆಯೆಂಬುದನ್ನು ನೋಡುವುದಕ್ಕೋಸ್ಕರ ನಾನು ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಕೊರಟಗೆರೆ ಮುಂತಾದ ಭಾಗಗಳಿಗೆ ಪ್ರವಾಸ ಹೋಗಿ ಅವರುಗಳ ಪರಿಸ್ಥಿತಿ ಏನಿದೆಯೆಂಬುದನ್ನು ಅರ್ಥಮಾಡಿಕೊಂಡು ಬಂದಿದ್ದೇನೆ. ಇವತ್ತು ನೂರಕ್ಕೆ ಎಂಬತ್ತರಷ್ಟು ಬೆಳೆ ಹಾಳಾಗಿದೆ ಆದರೆ ನಮ್ಮನ್ನು ಕಾಡುತ್ತಿರುವ ಒಂದು ಪ್ರಶ್ನೆ ಏನೆಂದರೆ ನಾವು ಇವತ್ತು ಆ ಬೀಜವನ್ನು ಸಬ್ಸಿಡಿ ದರದಲ್ಲಿ ಕೊಡಬೇಕೆಂದರೆ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ, ನಮಗೆ ಇರುವ ಒಂದು ತೊಂದರೆ ಅಂದರೆ ನಾವು ಯಾವುದಾದರೊಂದು ಸಂಸ್ಥೆಯ ಮೂಲಕ ಕೊಡಬೇಕಾಗುತ್ತದೆ. ನಮಗೆ ಇರತಕ್ಕಂಥ ಸಾಧನೆಗಳು ಅಂತ ಹೇಳಿದರೆ ಸೀಡ್ಸ್ ಕಾರ್ಪೊರೇಷನ್, ಆಯಿಲ್ ಫೆಡರೇಷನ್, ಇವುಗಳ ಮುಖೇನ ನಾವು ಬೀಜವನ್ನು ಕೊಡಬೇಕು ಎಂದಾದರೆ ಅವರು ಎಲ್ಲಂದಲಾದರೂ ಬೀಜವನ್ನು ಕೊಳ್ಳಲೇಬೇಕಾಗುತ್ತದೆ. ಅದರು ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಬೀಜವನ್ನು 17 ರೂಪಾಯಿಗಳಿಗೆ ಕೊಳ್ಳುತ್ತಿದ್ದಾರೆ. ಅವರು ಮತ್ತೆ ನಮಗೆ ರೈತರು ಕೊಡಬೇಕೆಂದಾಗ ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್‌ನವರು ಒಂದು ಕೆ.ಜಿ. ಬೀಜಕ್ಕೆ 27 ರೂಪಾಯಿಗಳೆಂದು ಕ್ವೋಟ್ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ಸೀಡ್ಸ್ ಕಾರ್ಪೊರೇಷನ್‌ನವರು 24 ರೂಪಾಯಿಗಳು ಕೊಡುತ್ತಿದ್ದಾರೆ. ನಮ್ಮ ಕರ್ನಾಟಕ ಸೀಡ್ಸ್ ಕಾಪೋರೇಷನ್‌ನವರು 24 ರೂಪಾಯಿಗಳು ಕೊಡುತ್ತಿದ್ದಾರೆ. ನಾವು ಆ ಬೀಜವನ್ನು ಸಬ್ಸಿಡಿ ದರದಲ್ಲಿ 21 ರೂಪಾಯಿಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾರುಕಟ್ಟೆಯಲ್ಲಿ ಒಳ್ಳೆಯ ಬೀಜಕ್ಕೆ ಸುಮಾರು 17- 18 ರೂಪಾಯಿಗಳು ಅಥವಾ 20 ರೂಪಾಯಿಗಳು ಇರುತ್ತದೆ. ಮಾರುಕಟ್ಟೆಯಲ್ಲಿ ಸಿಗತಕ್ಕಂಥ ಬೀಜಕ್ಕೂ ಮತ್ತು ನಾವು ಕೊಡತಕ್ಕಂಥ ಬೀಜಕ್ಕೂ.....

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಒಂದು ಕ್ವಿಂಟಾಲ್ ಕಡಲೆಕಾಯಿ ಬೀಜವನ್ನು ಎರಡು ಎರಡೂವರೆ ಸಾವಿರ ರೂಪಾಯಿಗಳಿಗೆ ತಂದು ಮಾರುತ್ತಾರೆ. ಇವತ್ತು ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ಕಡಲೆಕಾಯಿ ಬೀಜ 1300 ರಿಂದ 1500 ರೂಪಾಯಿಗಳಿಗೆ ಸಿಗುತ್ತದೆ ಕಡಲೆಕಾಯಿ ನೀವೇ ತೆಗೆದುಕೊಳ್ಳಿ ಎಂದು ಆಂಧ್ರಪ್ರದೇಶದಲ್ಲಿ ಒಂದು ಎಕರೆಗೆ 400 ರೂಪಾಯಿಗಳಂತೆ ಹಣ ಕೊಟ್ಟಿದ್ದಾರೆ ನಮ್ಮ ತಾಲ್ಲೂಕಿನ ಅಕ್ಕಪಕ್ಕದ ಹಳ್ಳಿಗಳು ಆಂಧ್ರಪ್ರದೇಶಕ್ಕೆ ಬರುವುದರಿಂದ ಆ ಹಳ್ಳಿಗಳ ರೈತರಿಗೆ ಒಂದು ಎಕರೆಗೆ 400 ರೂಪಾಯಿಗಳ ಪರಿಹಾರ ಹಣವನ್ನು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನ ರೈತರಿಗೆ ಆಂಧ್ರಪ್ರದೇಶದವರು 10 ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ ಆಂಧ್ರಪ್ರದೇಶದಿಂದ ದುಡ್ಡು ತಂದ ರೈತರು ಬಂದು ಹೇಳಿದ್ದಾರೆ ಇವತ್ತು ತಾಪು ಈ ರೇಟಿನಲ್ಲಿ ಕೊಡುತ್ತೇವೆಂದು ಹೇಳಿದರೆ ಅದು ಸಾಧ್ಯವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳಿಗೆ ಈ ಸಬ್ಜೆಕ್ಟ್ ನೇರವಾಗಿ ಬರುತ್ತದೆ, ಅವರು ಸದನದಿಂದ ಹೊರಹೋಗುತ್ತಿದ್ದಾರೆ.

ಶ್ರೀ ವೆಂಕಟರಮಣಪ್ಪ: ಮಾನ್ಯ ಉಪಾಧ್ಯಕ್ಷರೆ, ರೈತರು ಬೆಳೆದ ಕಡಲೆಕಾಯಿಯಿಂದ ಎಣ್ಣೆಯನ್ನು ತೆಗೆದು ನಾವು ಆ ಎಣ್ಣೆಯನ್ನು ಉಪಯೋಗ ಮಾಡುತ್ತೇವೆ. ರೈತರು ರಾಗಿ ಮತ್ತು ಜೋಳ ತಿನ್ನತಕ್ಕಂಥವರು, ರೈತರು ಕಡಲೆಕಾಯಿ ಬೆಳೆದು, ಅದರಿಂದ ಎಣ್ಣೆ ತೆಗೆದು ಆ ಎಣ್ಣೆಯಿಂದ ತಾವು ತಾವು ಒಗ್ಗರಣೆ ಹಾಕಿಕೊಂಡು ತಿನ್ನಿ ಎಂದು ಹೇಳತಕ್ಕಂಥವರು. ಅವರ ಬಗ್ಗೆ ತಾವು ಅನುಕಂಪ್ಪು

ತೋರಿಸಬೇಕು. ಇವತ್ತು ರೈತರು ರಾಗಿಯನ್ನು ಸಹ ಬೆಳೆಯುವುದಕ್ಕೆ ಆಗುವುದಿಲ್ಲ. ಕಡಲೆಕಾಯಿಗೆ ಒಂದು ಕ್ವಿಂಟಾಲ್‌ಗೆ 2000 ರೂಪಾಯಿಗಳಾಗುತ್ತದೆ, ಅವರು ಎಲ್ಲಿಂದ ಹಣ ತರುತ್ತಾರೆ? ನಮ್ಮ ತಾಲ್ಲೂಕಿನಲ್ಲಿ ಯಾವುದೇ ಕೆರೆಕುಂಟೆಗಳು ಇಲ್ಲ, ನದಿಗಳು ಇಲ್ಲ, ನಮ್ಮಲ್ಲಿ ಕಡಲೆಕಾಯಿಯನ್ನು ಬಿಟ್ಟರೆ ಏನೂ ಬೆಳೆಯುವುದಿಲ್ಲ. ನೂರಕ್ಕೆ ತೊಂಬತ್ತು ಭಾಗದಷ್ಟು ಕಡಲೆಕಾಯಿಯನ್ನು ಬೆಳೆಯತಕ್ಕಂಥವರು ನಮ್ಮ ಪಾವಗಡ ತಾಲ್ಲೂಕಿನಲ್ಲಿರತಕ್ಕಂಥವರು. ಆದ್ದರಿಂದ ಆ ರೈತರಿಗೆ ತಾವು ಒಳ್ಳೆಯ ಕಡಲೆಕಾಯಿ ಬೀಜವನ್ನು ಒದಗಿಸಬೇಕಾಗುತ್ತದೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಕೆಟ್ಟ ಮುಕ್ತ- ಅಮದು ನೀತಿಯಿಂದ ರೈತ ಈಗಾಗಲೇ ಕಂಗಾಲಾಗಿದ್ದಾನೆ. ಸರ್ಕಾರ ಕಡಲೆಕಾಯಿಯನ್ನು ಸಹ ಅಮದು ಮಾಡಿಕೊಳ್ಳುತ್ತೇವೆಂದು ಹೇಳಿದರೆ ಕಡಲೆಕಾಯಿ ಬೆಳೆಯತಕ್ಕಂಥ ರೈತ ಮಣ್ಣು ತಿನ್ನಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಕಡಲೆಕಾಯಿಯನ್ನು ಬೆಳೆಯತಕ್ಕಂಥ ರೈತರ ರಕ್ಷಣೆಗೆ ಬರದೇ ಹೋದರೆ ಬಹಳ ಕೆಟ್ಟ ಪರಿಣಾಮವಾಗುತ್ತದೆ. ಅವರಿಗೆ ಪ್ರೋತ್ಸಾಹ ಕೊಡುವಂತಹ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಅದನ್ನು ಸಬ್ಸಿಡಿ ಬೇರೆ ರಾಜ್ಯದಲ್ಲಿ ಕೊಡುತ್ತಿದ್ದಾರೆ; ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೊಡಿ ಎಂದು ಹೇಳಿದಾಗ ಮೂಲಭೂತವಾಗಿ ಒಂದು ಪ್ರಶ್ನೆ ಬರುತ್ತದೆ. ನಾವು ಶೇಂಗಾ ಬೆಳೆಗೆ ಬಿತ್ತನೆ ಬೀಜವನ್ನು ಕೊಡುವುದರಲ್ಲಿ ರಿಯಾಯಿತಿಯನ್ನು ತೋರಿಸಿದರೆ ಬೇರೆ ಎಲ್ಲಾ ಬೆಳೆಗಳಿಗೂ ಸಹ ರಿಯಾಯಿತಿ ಕೊಡಬೇಕಾಗುತ್ತದೆ. ಆ ಕಷ್ಟ ಈ ಸಭೆಯಲ್ಲಿರತಕ್ಕಂಥಾ ಎಲ್ಲರಿಗೂ ಗೊತ್ತಿರತಕ್ಕಂಥಾದ್ದು.

ಶ್ರೀ ವೆಂಕಟರವಣಪ್ಪ : ಮಾನ್ಯ ಅಧ್ಯಕ್ಷರೆ ಸರ್ಕಾರ ಮೆಣಸಿನಕಾಯಿ ಬೆಳೆಯುವವರಿಗೆ ಬೆಳೆನಷ್ಟವಾದಾಗ ಪರಿಹಾರ ಕೊಟ್ಟಿದ್ದಾರೆ. ಗುಲ್ಬರ್ಗದಲ್ಲಿ ತೊಗರಿ ಬೆಳೆಗೆ ಹಾನಿಯಾದಾಗ, ಕೋಲಾರದಲ್ಲಿ ಆಲ್ಟರ್ನೇಟ್ ಬೆಳೆ ಹಾಳಾದಾಗ ಅಲ್ಲಿ ಪರಿಹಾರ ಕೊಟ್ಟಿದ್ದೀರಿ. ಈ ಕಡಲೆಕಾಯಿ ಬೆಳೆಗೆ ಏಕೆ ಪರಿಹಾರ ಕೊಡುವುದಿಲ್ಲ?

ಉಪಾಧ್ಯಕ್ಷರು : ಅವರು ಪ್ರಶ್ನೆ ಏನೆಂದರೆ ಆಂಧ್ರಪ್ರದೇಶದಲ್ಲಿ ಒಂದು ಎಕರೆಗೆ 400 ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ, ನಮ್ಮಲ್ಲಿ ಏಕೆ ಕೊಡುತ್ತಿಲ್ಲ ಎನ್ನುವುದು.

ಶ್ರೀ ಹೆ.ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೇ, ಹೆಂಡದ ದೊರೆಗಳಿಗೆ ನಾವು ಬಡ್ಡಿಯನ್ನು ಮಾಫಿ ಮಾಡುತ್ತೇವೆ, ಶ್ರೀಷ್ಟ ಈ ಕಡಲೆಕಾಯಿ ಬೀಜ ಹೇಗೆ ಇದೆ ಅಂದರೆ ಇವತ್ತು ಎಲ್ಲಾ ಬೀಜಗಳಿಗಿಂತಲೂ ಕಡಲೆಕಾಯಿ ಬೀಜ ದರ ಹೆಚ್ಚು. ಬೇರೆ ಬೇರೆ ಬಿತ್ತನೆಬೀಜಗಳಿಗೆ ಅಷ್ಟು ಹೆಚ್ಚು ಬೆಲೆ ಇಲ್ಲ. ಆದ್ದರಿಂದ ಕಡಲೆಕಾಯಿ ಬೀಜಕ್ಕೆ ಸರ್ಕಾರ ಹಣ ಕೊಡಲೇಬೇಕಾಗುತ್ತದೆ. ರಾಗಿ ಇರಬಹುದು, ಭತ್ತ ಇರಬಹುದು, ಈ ಬೆಳೆಗಳ ಬೀಜಕ್ಕೆ ಅಷ್ಟು ಬೆಲೆ ಹೆಚ್ಚು ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಬೆಳೆ ಹಾನಿಯಾಗಿರುವುದು ಬರೀ ಶೇಂಗಾ ಒಂದೇ ಅಲ್ಲ, ಬೇರೆ ಎಲ್ಲಾ ಬೆಳೆಗಳೂ ಹಾಳಾಗಿವೆ. ಎಕ್ಕೆಣ ಬೀಜಗಳಾದ ಎಳ್ಳು ಇರಬಹುದು, ಶೇಂಗಾ ಇರಬಹುದು, ಸೂರ್ಯಕಾಂತಿ ಬೀಜ ಇರಬಹುದು, ಅಲ್ಲಿಯೂ ಸಹ ಸಾಕಷ್ಟು ಬೆಳೆ ಹಾನಿಯಾಗಿದೆ. ಹರಳು ಇರಬಹುದು, ಆ ವಾತಾವರಣದಿಂದ ಬೆಳೆ ಹಾಳಾಗಿ ಎಲ್ಲಾ ರೈತರು ಸಹ

ತೊಂದರೆಯಲ್ಲಿದ್ದಾರೆ. ಮಾನ್ಯ ಸದಸ್ಯರಾದ ಮುದ್ದುಹನುಮೇಗೌಡರು ಮುಖ್ಯವಾಗಿ ಈಗ ಒಂದು ಪ್ರಶ್ನೆ ಮಾಡಿದರು, ಅದೇನೆಂದರೆ ಹೊರರಾಷ್ಟ್ರಗಳಿಂದ ಬರುತಕ್ಕಂಥ ಎಣ್ಣೆಯಿಂದ ಮತ್ತು ಎಣ್ಣೆ ಕಾಳುಗಳಿಂದ ಬೆಳೆ ಹಾಳಾಗಿದೆ ಎಂದು ಅದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ ನಾವು ರೈತರಾಗಿ ಒಂದು ಸಲ ಯೋಚನೆ ಮಾಡಬೇಕಾಗುತ್ತದೆ. ಇವತ್ತು ರೈತ ಕಷ್ಟಪಟ್ಟು ನೆಲಗಡಲೆಯನ್ನು ಬೆಳೆದಂತಹ ಸಂದರ್ಭದಲ್ಲಿ ಅದರಿಂದ ರೈತರಿಗೆ ಏನಾದರೂ ಲಾಭ ಬರುತ್ತಿದೆಯೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುವ ರೀತಿಯಲ್ಲಿ ವಹಿವಾಟು ನಡೆಯುತ್ತಿದೆ. ಕಳೆದ ಹತ್ತಾರು ವರ್ಷಗಳಿಂದ ಈ ದೇಶಕ್ಕೆ ಎಣ್ಣೆ ಕಾಳುಗಳು ಆಮದು ಆಗುತ್ತಿರುವಂತಹ ಪ್ರಮಾಣವನ್ನು ನೋಡಿದಾಗ ವರ್ಷದಿಂದ ವರ್ಷಕ್ಕೆ ಹೆಕ್ಟೇರ್‌ವಾರು ಉತ್ಪಾದನೆಯಲ್ಲಿ ಕಡಿಮೆಯಾಗುತ್ತಿರುವಂಥಾದ್ದು ವಾಸ್ತವಿಕವಾಗಿದೆ. ನಾವು ಹೇಳುವುದಾದರೆ ಹೋದ ವರ್ಷ ಡಿಸೆಂಬರ್‌ವರೆಗೂ ಕೂಡ ಈ ರಾಷ್ಟ್ರದಲ್ಲಿ ಸುಮಾರು 43.93 ಲಕ್ಷ ಟನ್‌ಗಳಷ್ಟು ಎಣ್ಣೆ ಕಾಳುಗಳು ಆಮದು ಆಗಿದೆ. ಸುಮಾರು 9 ಸಾವಿರ ಕೋಟಿ ರೂಪಾಯಿಗಳಷ್ಟು ಎಣ್ಣೆ ಆಮದು ಆಗಿದೆ. ಆಮದು ಆಗಿರುವಂತಹ ಎಣ್ಣೆ ಯಾವುದೆಂದರೆ ಬಹುತೇಕವಾಗಿ ಶೇಕಡ 70ರಿಂದ 80ರಷ್ಟು.....

ಶ್ರೀ ಎಸ್ ಎಸ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ರೈತರಿಗೆ ಪರಿಹಾರ ಕೊಡುವುದಕ್ಕೆ ಆಗುತ್ತದೆ ಆಥವಾ ಇಲ್ಲ ಎನ್ನುವುದನ್ನು ಅವರು ನೇರವಾಗಿ ಹೇಳಲಿ. ಅದನ್ನು ಹೇಳಲಾರದೆ ಸುಮ್ಮನೆ ಮಾತನಾಡುತ್ತಿದ್ದಾರೆ. ಇಲ್ಲ ತಾವು ಕುಳಿತಾಗ ತಾವು ಏನೇನು ಮಾತನಾಡಿದ್ದೀರಿ ಎನ್ನುವುದನ್ನು ನಾನು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಇಲ್ಲ ಕುಳಿತಿದ್ದಾಗ ಏನು ಮಾತನಾಡಿದ್ದೀರಿ ಎನ್ನುವುದನ್ನು ನಾನು ಅಲ್ಲಿ ಕುಳಿತು ಕೇಳಿದ್ದೇನೆ. ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇವತ್ತು ತಾವು ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ದುಡ್ಡು ಕಡಿಮೆ ಇಟ್ಟಿದ್ದೀರಿ. ಕೃಷಿ ಮಂತ್ರಿಗಳಾಗಿ ತಾವು ಏನು ಮಾಡುತ್ತಿದ್ದಿರಿ? ತಾವು ಬಜೆಟ್ ಮೇಲೆ ಮಾತನಾಡುವಾಗ ಚೆನ್ನಾಗಿ ಹೊಗಳುತ್ತೀರಿ. ತಾವು 7 ಸಾವಿರ ಕೋಟಿರೂಪಾಯಿಗಳ ಬಜೆಟ್ ಮಾಡಿ ಕೃಷಿಗೆ ಹಣ ಕಡಿಮೆ ಮಾಡಿದ್ದೀರಿ. ಗ್ರಾಮೀಣ ಅಭಿವೃದ್ಧಿಗೆ ಕಡಿಮೆ ಪ್ರಾಶಸ್ತ್ಯ ನಿಡಿದ್ದೀರಿ ನಾಳೆ ನಾವು ಈ ಬಗ್ಗೆ ಮಾತನಾಡುತ್ತೇವೆ. ನಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ ನಾವು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಆ ಪ್ರಶ್ನೆ ಈಗ ಇಲ್ಲ. ಇದನ್ನು ಕೇಂದ್ರ ಸರ್ಕಾರ ಮಾಡಿರತಕ್ಕಂಥಾದ್ದು, ತಾವು ಆ ಕಡೆ ತೋರಿಸಿ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್ - ಮಾನ್ಯ ಉಪಾಧ್ಯಕ್ಷರೆ, ತಾವು ಕೇಳಲಿಲ್ಲ ಎಂದು ತೋರುತ್ತದೆ ಮಾನ್ಯ ಮುಂತ್ರಿಗಳು ಮಾತನಾಡುತ್ತಾ ಕಂದಾಯ ಇಲಾಖೆಯ ಜೊತೆ ಕೂಡಿ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಟ್ಟಿದ್ದೇವೆಂದು ಹೇಳಿದರು, ಏನು ಮಾಡಿದ್ದಾರೆ ಎಂಬುದನ್ನು ಹೇಳಬೇಕು ರೈತರಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಆರ್. ನಾರಾಯಣ್ : ಮಾನ್ಯ ಉಪಾಧ್ಯಕ್ಷರ ನಾವು ಈಗ ಗಮನಸೆಳೆಯಬೇಕಾಗಿರತಕ್ಕಂಥಾದ್ದು, ಈ ಕಡಲೆಕಾಯಿ ಬೆಳೆಯ ವಿಫಲತೆಯಿಂದ ರೈತರಿಂದ ಆಗಿರತಕ್ಕಂಥ ನಷ್ಟಕ್ಕೆ ಪರಿಹಾರ ಕೊಡುವುದಕ್ಕೆ

ಸಾಧ್ಯವೇ ಎನ್ನುವುದು ಒಂದು. ಮತ್ತು ಬಿತ್ತನೆ ಕಡಲೆಕಾಯಿ ಬೀಜ ಈಗ ಲಭ್ಯವಿಲ್ಲದೆ ಇರುವುದರಿಂದ ಅದನ್ನು ಯಾವ ರೀತಿಯಲ್ಲಿ ಒದಗಿಸುತ್ತೀರಾ? ತಾವು ಈಗ ನಷ್ಟಕ್ಕೆ ಪರಿಹಾರ ಕೊಡುವುದಕ್ಕೆ ತಯಾರಿಲ್ಲ. ಮತ್ತು ಬಿತ್ತನೆ ಬೀಜಕ್ಕೆ ಸಬ್ಸಿಡಿಯನ್ನು ಕೊಡುವುದಕ್ಕೂ ತಯಾರಿಲ್ಲ ಅಂದರೆ ಕಡಲೆಕಾಯಿ ಬೆಳೆದಂಥ ರೈತರಿಗೆ ತಾವು ಯಾವ ರೀತಿಯಲ್ಲಿ ಸ್ಪಂದಿಸುತ್ತೀರಿ? ಇದಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೊಟ್ಟರೆ ಸಾಕು. ಈಗ ಹೊಸ್ಯಾ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ನಮಗೆ ಯಾವುದೇ ರೀತಿಯಲ್ಲಿ ಸಮಾಧಾನ ತಂದಿಲ್ಲ. ತಾವು ಪರಿಹಾರ ಕೊಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎನ್ನುವುದು ಮತ್ತು ಬಿತ್ತನೆ ಕಡಲೆಕಾಯಿ ಬೀಜಕ್ಕೆ ಸಬ್ಸಿಡಿಕೊಟ್ಟು ನಷ್ಟದಲ್ಲಿರುವ ರೈತರಿಗೆ ಸ್ಪಂದಿಸುತ್ತೀರಾ ಎನ್ನುವುದು ಮುಖ್ಯ.

4.00 ಪಿ.ಎಂ.

ಶ್ರೀ ಟಿ.ಜಿ. ಜಯಚಂದ್ರ : ನಾನು ಈಗಾಗಲೇ ಹೇಳಿದ್ದೇನೆ. ನಾವು ಸದ್ಯಕ್ಕೆ ಯಾವುದೇ ಒಂದು ಬೆಳೆಗೆ ಸಬ್ಸಿಡಿಯನ್ನು ಕೊಡುವುದಾದರೆ ನಾವು ಎಲ್ಲಾ ಬೆಳೆಗಳಿಗೂ ಕೂಡ ಅದನ್ನು ಕೊಡಬೇಕಾಗುತ್ತದೆ. ತಾಸ್ತವಿಕವಾಗಿರತಕ್ಕಂಥ ಸಂಗತಿಯನ್ನು ನಾನು ಇಲ್ಲಿ ಹೇಳಿದ್ದೇನೆ. ಆದರೆ ನಮಲ್ಲಿರತಕ್ಕಂಥ ದಾಸ್ತಾನು ಮತ್ತು ಈಗ ಬರತಕ್ಕಂಥ ಬೆಳೆಯನ್ನು ನೋಡಿದಾಗ ಬಿತ್ತನೆ ಬೀಜಕ್ಕೆ ಯಾವ ರೀತಿಯಾದಂಥ ತೊಂದರೆಯೂ ಕೂಡ ಬರುವುದಿಲ್ಲ.....

ಶ್ರೀ ನೆಂಕಟರಮಣಪ್ಪ : ಮಾನ್ಯ ಮಂತ್ರಿಗಳೇ, ನೀವು ಹಣವನ್ನು ಈ ಬೀಜಕ್ಕೆ ಕೊಡುತ್ತೀರೋ ಇಲ್ಲವೋ ಅಷ್ಟನ್ನು ಹೇಳಿ. ನಮಗೆ ಬೇರೆ ವಿಚಾರ ಬೇಡ. ಈಗ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ತಾಲ್ಲೂಕಿನಲ್ಲಿ ಕಡ್ಲೇಕಾಯಿ ಬಿಟ್ಟರೆ ಬೇರೇನೂ ಬೆಳೆಯುವುದಿಲ್ಲ. ಇವತ್ತು ದನಕರುಗಳನ್ನು ಅಲ್ಲಿ ರೈತ ಮಾರಿಕೊಂಡಿದ್ದಾನೆ. ಇವತ್ತು ಅಲ್ಲಿ ಕುಡಿಯುವ ನೀರು ಇಲ್ಲ. ಕಡ್ಲೇಕಾಯಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಲಿ. ನಾವು ಈಗ ಆಲ್ಲಿಗೆ ಹೋದರೆ ನಮ್ಮನ್ನು ಅಲ್ಲಿ ಬೀದಿಯಲ್ಲಿ ನಿಲ್ಲಿಸುತ್ತಾರೆ. ಆಂಧ್ರದಲ್ಲಿ ನೀಡಿದಂತೆ ಸಬ್ಸಿಡಿ ನೀಡಿ. ಉಚಿತವಾಗಿ ಬಿತ್ತನೆ ಬೀಜವನ್ನು ನೀಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ : ಬಿತ್ತನೆ ಬೀಜಕ್ಕೆ ಯಾವುದೇ ರೀತಿಯಾದಂತಹ ತೊಂದರೆಯಾಗುವುದಿಲ್ಲ. ನಾನು ಪದೇ ಪದೇ ಈ ಮಾತನ್ನು ಹೇಳುತ್ತಿದ್ದೇನೆ, ಆದರೆ ನೀವು ರಿಲೀಫ್ ಕೊಡಬೇಕು, ಸಬ್ಸಿಡಿ ಕೊಡಬೇಕು ಎಂದು ಕೇಳುತ್ತಿದ್ದೀರಿ. ನಾವು ಸ್ವಲ್ಪಮಟ್ಟಿಗೆ ಸಬ್ಸಿಡಿ ಮೂಲಕ ರಿಲೀಫ್ ಕೊಡುವುದಕ್ಕೆ ತಯಾರಿದ್ದೇವೆ. ಸುಮಾರು 20-21ರೂಗಳ ಅಂದಾಜಿನಲ್ಲಿ ಇವತ್ತು ರೈತರಿಗೆ ದೊರಕಿಸತಕ್ಕಂಥ ಕೇಸನ್ನು ನಾವು ಮಾಡುತ್ತೇವೆ. ಸಬ್ಸಿಡಿ ಕೊಡುವುದೇ ಇಲ್ಲ ಎಂದೇನೂ ನಾವು ಹೇಳುತ್ತಿಲ್ಲ. ಆದರೆ ಕೇಂದ್ರ ಸರ್ಕಾರವು ಬಿತ್ತನೆ ಬೀಜಗಳ ಮೇಲೆ ಕೊಡುತ್ತಿರುವಂತಹ ಸಬ್ಸಿಡಿಯನ್ನೂ ಕೂಡ ವಿತ್‌ಡ್ರಾ ಮಾಡುವಂತಹ ಹಂತದಲ್ಲಿದೆ. ಹೀಗಾಗಿ ಸರ್ಕಾರಕ್ಕೆ ಸ್ವಲ್ಪ ಕಷ್ಟವಾಗಿದೆ. ಬಿತ್ತನೆ ಬೀಜಕ್ಕೂ ಕೂಡ ಸಬ್ಸಿಡಿ ಕೊಡತಕ್ಕಂಥ ಒಂದು ನಿಯಮ ಇದೆ. ಸುಮಾರು 5 ಸಾವಿರ ಕ್ವಿಂಟಾಲ್‌ಗೆ ಇವತ್ತು ಕೇಂದ್ರ ಸರ್ಕಾರದಿಂದಲೂ ಕೂಡ ಸಬ್ಸಿಡಿಯನ್ನು ಕೊಡುತ್ತಾರೆ. ಆದರೆ ಆ ಸಬ್ಸಿಡಿಯನ್ನೂ ಕೂಡ ವಿತ್‌ಡ್ರಾ ಮಾತಬೇಕೆಂಬ ಆಲೋಚನೆಯನ್ನು ಕೇಂದ್ರ ಮಾಡುತ್ತಿದೆ. ಮೊನ್ನೆ ಮೂರು ದಿವಸಗಳ ಹಿಂದೆ ನಡೆದಂತಹ ಖರೀಫ್ ಕಾನ್ಫರೆನ್ಸ್‌ನಲ್ಲಿ ಅದನ್ನು ಕೇಂದ್ರ ಸರ್ಕಾರ ಇಂಡಿಕೇಟ್ ಮಾಡಿದೆ. ಆದರೂ ಕೂಡ ರಾಜ್ಯ ಸರ್ಕಾರ ಸ್ವಲ್ಪಮಟ್ಟಿಗೆ ಅವರ ನೆರವಿಗೆ ಬಂದು

ಕನಿಷ್ಠವಾಗಿ ಮಾರುಕಟ್ಟೆಯಲ್ಲಿ ಸಿಗತಕ್ಕಂಥ ರೀತಿಯಲ್ಲೂ ಕೂಡ ಕೊಡಲಿಕ್ಕೆ ಸಾಧ್ಯವಿದೆ. ಅದನ್ನು ಮಾಡುವುದಕ್ಕೆ ನಾವು ಇವತ್ತಿಗೂ ಕೂಡ ಸಿದ್ಧರಿದ್ದೇವೆ. ಆದರೆ ಆಂಧ್ರ ಮಾದರಿಯಲ್ಲಿ ಕೊಡತಕ್ಕಂಥ ರೀತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಇನ್ನು 15-20 ದಿವಸಗಳಾದ ಮೇಲೆ ಪರಿಸ್ಥಿತಿಯನ್ನು ನೋಡಿ ನಾವು ಚಿಂತನೆ ಮಾಡುವುದಕ್ಕೆ ತಯಾರಿದ್ದೇವೆ. ಆ ಸಂದರ್ಭದಲ್ಲಿ ನಿಮ್ಮನ್ನೆಲ್ಲಾ ಕರೆದು ನಾವು ಚರ್ಚೆ ಮಾಡುತ್ತೇವೆ ಎಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ...

ಉಪಾಧ್ಯಕ್ಷರು : ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇನ್ನು ಬೇಡ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ತಾವು ಕೂಡ ರೈತರಿದ್ದೀರಿ ಇದು ರೈತರ ಪ್ರಶ್ನೆಯಾದ್ದರಿಂದ ಇನ್ನಷ್ಟು ಮಾತನಾಡಲು ಅವಕಾಶ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಪಾಟೀಲರು ಹಿರಿಯ ಸದಸ್ಯರಾಗಿದ್ದಾರೆ. ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿದವರು ಮಾತ್ರ ಮಾತನಾಡಬೇಕು. ತಾವು ಸಹಿ ಹಾಕದೇ ಏಕಾಏಕಿಯಾಗಿ ಮಾತನಾಡಲು ಎದ್ದು ನಿಂತು ಬಿಟ್ಟರೆ ಸದನ ನಡೆಸುವುದಾದರೂ ಹೇಗೆ? ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಬೆಳಗ್ಗಿನಿಂದ ಸಾಯಂಕಾಲದವರೆಗೂ ಕೂಡ ನಾವು ನಾನ್-ಅಫಿಷಿಯಲ್ ಬಿಸಿನೆಸ್ ಅನ್ನೇ ಮಾಡುತ್ತಿದ್ದೇವೆ. ತಮಗೆಲ್ಲಾ ಅನುಕೂಲವಾಗಲೀ, ರೈತರ ಸಮಸ್ಯೆಗಳ ಬಗ್ಗೆ ಡಿಸ್ಕಷನ್ ಆಗಲೀ ಎಂದು ಈ ರೀತಿ ಮಾಡುತ್ತಿದ್ದೇವೆ. ಆದರೆ ಅಫಿಷಿಯಲ್ ಬಿಸಿನೆಸ್ ಅನ್ನು ನಡೆಸುವುದಕ್ಕೂ ಕೂಡ ಸಮಯದ ಅಗತ್ಯವಿದೆಯಲ್ಲವೇ? ರೈತರ ಪರವಾಗಿ ನೀವು ಮಾತನಾಡಬಯಸುತ್ತಿದ್ದೀರಿ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ತಾವು ಎಲ್ಲಾ ವಿಷಯಗಳ ಮೇಲೆ ಮಾತನಾಡಬಹುದಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ರೈತರ ಬಗ್ಗೆ ಚರ್ಚೆ ಮಾಡುವುದು ನಿಮಗೆ ಬೇಕಾಗಿಲ್ಲ. ನಾನು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಮಾಡುವುದಕ್ಕೂ ಕೂಡ ಕೆಲವೊಂದು ನಿಯಮಗಳು ಇರುತ್ತವೆ ಎಂಬುದನ್ನು ಮಾನ್ಯ ಸದಸ್ಯರು ಗೊತ್ತು ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ರೈತರ ಬಗ್ಗೆ ಮಾತನಾಡುವಾಗ ಎಲ್ಲಾ ಪಕ್ಷಗಳವರೂ ಕೂಡ ಒಂದಾಗಬೇಕಾಗುತ್ತದೆ.

(ಗೊಂದಲ)

ಶ್ರೀ ವೆಂಕಟರಮಣಪ್ಪ : ಮಾನ್ಯ ಮಂತ್ರಿಗಳು 21ರಂದು ರೇಟಿನಲ್ಲಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಮಾರ್ಕೆಟ್‌ನಲ್ಲಿ ಇವತ್ತು 15 ರೂ. ಗೆ ಸಿಗುತ್ತದೆ. ಅದಕ್ಕಿಂತ ಸಬ್ಸಿಡಿ ರೂಪದಲ್ಲಿ ಕೊಟ್ಟರೂ ಕೂಡ ಎಷ್ಟಾಗುತ್ತದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು. ಅವರ ....

ಉಪಾಧ್ಯಕ್ಷರು : ಈಗಾಗಲೇ ಮಾನ್ಯ ಕೃಷಿ ಮಂತ್ರಿಗಳು ಇದನ್ನು ನಾವು ಪರಿಶೀಲನೆ ಮಾಡುತ್ತೇವೆ, ಅಂತಹ ಸಂದರ್ಭ ಬಂದಾಗ ನಿಮ್ಮೆಲ್ಲರ ಸಲಹೆಗಳನ್ನು ಕೇಳಿ ನಾನು ಮುಂದಿನ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಆದ್ದರಿಂದ ಇಷ್ಟಕ್ಕೆ ಇದರ ಮೇಲಿನ ಚರ್ಚೆಯನ್ನು ನಿಲ್ಲಿಸಿಬಿಡಿ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಆ ವಿಷಯವನ್ನು ಕೇಳುತ್ತಿಲ್ಲ. ಸರ್ಕಾರ ಆಯಿಲ್ ಸೀಡ್ಸ್‌ಗೆ ಸಬ್ಸಿಡಿ ಕೊಡುವುದಾದರೆ ರೂ. 21 ಆಗುತ್ತದೆ ಮಾರ್ಕೆಟ್‌ನಲ್ಲಿ ಅದು 15 ರೂಗೆ ಸಿಗುತ್ತದೆ. ಆದ್ದರಿಂದ ಯಾವ ರೇಟ್‌ನಲ್ಲಿ ಕೊಡುತ್ತೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಅದಕ್ಕೆ ಸ್ಪಷ್ಟೀಕರಣ ನೀಡಲಿ.

ಶ್ರೀ ಟಿ.ಬಿ. ಜಯಚಂದ್ರ : ಈಗ ಬಿತ್ತನೆ ಬೀಜ ಮಾರ್ಕೆಟ್‌ನಲ್ಲಿ 1100-1200 ರೂ. ಗಳಿಗೆ ಏನು ಸಿಗುತ್ತಿದೆ, ಬಿತ್ತನೆ ಬೀಜಗೋಸ್ಕರ ನೀವು ಅದನ್ನು ವಿಂಗಡಿಸಿದ್ದೇ ಆದರೆ ರೈತನಿಗೂ ಕೂಡ 1800-1900 ರೂ. ಬೀಳುತ್ತದೆ. ನಾವು ಈಗ 2100 ರೂ. ಗಳನ್ನು ಕ್ವಿಂಟಾಲ್‌ಗೆ ಕೊಡಬೇಕು ಎನ್ನುವುದಾದರೆ, ನಾವು ಸಬ್ಸಿಡಿ ಮೂಲಕವೇ ಅದಕ್ಕೆ ಕೊಡಬೇಕಾಗುತ್ತದೆ. ಸಬ್ಸಿಡಿ ಕೊಡುವ ವಿಷಯದಲ್ಲಿ ಸರ್ಕಾರ ಇವತ್ತು ಕಡಿಮೆ ಬೆಲೆಗೆ ಸಿಗಬೇಕು ಎನ್ನುವ ಕಾರಣಕ್ಕೋಸ್ಕರ ನಾವು ಸಾಕಷ್ಟು ಹಣವನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಸ್ಪಷ್ಟ ನೀತಿ ಇಲ್ಲದಿರುವ ಕಾರಣ ತೊಂದರೆಯಾಗಿದೆ. ಅದು ನಮ್ಮ ಗಮನದಲ್ಲಿದೆ. ನಾವು ಕೂಡ ನಿಮ್ಮ ಪರವಾಗಿಯೇ ಇದ್ದೇವೆ. ದಯಮಾಡಿ ಸ್ವಲ್ಪ ದಿವಸಗಳ ಕಾಲ ತಾವು ಸಾವಧಾನವಾಗಿ ಕಾದು ನೋಡಿ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು : ಮಾನ್ಯ ವೆಂಕಟರಮಣಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ನಾನು ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಈಗ ಕೈಗೆತ್ತಿಕೊಳ್ಳುತ್ತಿದ್ದೇನೆ.

6. (ಅ) ಬೀದರ್ ಜಿಲ್ಲೆಯ ಶಾಸಕರುಗಳಿಗೆ ವಿಶೇಷ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ.

ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್) : ಮಾನ್ಯ ಉಪಾಧ್ಯಕ್ಷರೇ, ಬೀದರ್ ಜಿಲ್ಲೆಯ ಶಾಸಕರುಗಳಾದ ಮಾನ್ಯ ಪ್ರಕಾಶ್ ಖಂಡ್ರೆ, ರಾಜೇಂದ್ರ ವರ್ಮ, ಗುಂಡಪ್ಪ ವಕೀಲ, ಸುಭಾಷ ಕಲ್ಲೂರ್ ಹಾಗೂ ರಮೇಶ್ ಕುಮಾರ್ ಪಾಂಡೆ ಅವರುಗಳಿಗೆ ವಿಶೇಷ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಜಿರಾದ್ ಶಾಸಕರಾದ ಶ್ರೀ ಗುಂಡಪ್ಪ ವಕೀಲ್ ಇವರಿಗೆ ಎಕ್ಸ್ ವರ್ಗದ ಸುರಕ್ಷತೆಯನ್ನು ಕೊಡಲಾಗಿದೆ. ಬೀದರ್ ಜಿಲ್ಲೆಯ ಉಳಿದ ಎಲ್ಲ ಶಾಸಕರಿಗೆ (ಲೋಕಸಭಾ ಸದಸ್ಯರನ್ನೂ ಒಳಗೊಂಡಂತೆ) ಪ್ರತಿಯೊಬ್ಬರಿಗೆ ಶಾಶ್ವತವಾಗಿ ಒಬ್ಬ ಗನ್-ಮ್ಯಾನ್ ಒದಗಿಸಲಾಗಿದೆ. ಸದರಿ ಗನ್-ಮ್ಯಾನನ್ನು ಶಾಸಕರು ತಮ್ಮ ಕ್ಷೇತ್ರದಲ್ಲಿನ ವಾಸ್ತವ್ಯ, ಪ್ರವಾಸ, ಜಿಲ್ಲೆಯ ಒಳಗೆ ಮತ್ತು ಹೊರಗೆ (ಬೀದರ್ ಜಿಲ್ಲೆ ಮತ್ತು ಬೆಂಗಳೂರಿನ ನಡುವಣ ಪ್ರವಾಸವನ್ನೂ ಒಳಗೊಂಡಂತೆ) ಈ ಗನ್-ಮ್ಯಾನನ್ನು ತಮ್ಮ ಜೊತೆ